(8)

# ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/11/ಎಲ್ಆರ್‌ಡಿಸಿ/2019-20/2364

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560 001
ದಿನಾಂಕ:29-02-2020

## -:ಸುತ್ತೋಲೆ:-

ವಿಷಯ:- ರಾಜ್ಯದ ಎಲ್ಲಾ ಪಾಲಿಟೆಕ್ನಿಕ್ ಪದವಿ ತರಗತಿಗಳ ವಿದ್ಯಾರ್ಥಿ ಸಮುದಾಯಕ್ಕೆ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಿತ್ರವಾದ "ಇಂಡಿಯಾ ವರ್ಸಸ್ ಇಂಗ್ಲೆಂಡ್" ಚಲನಚಿತ್ರವನ್ನು ರಿಯಾಯಿತಿ ದರದಲ್ಲಿ ಪ್ರದರ್ಶಿಸಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ:- ಡಾ॥ ನಾಗತಿಹಳ್ಳಿ ಚಂದ್ರಶೇಖರ, (ನಿರ್ಮಾಪಕ) ಬೆಂಗಳೂರು ಇವರ ಪತ್ರ ದಿ:11-02-2020.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಮ್ಮ ನಾಗತಿಹಳ್ಳಿ ಸಿನಿ ಕ್ರಿಯೇಷನ್ಸ್ ಲಾಂಛನದಲ್ಲಿ ನಿರ್ಮಾಣವಾಗಿರುವ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಿತ್ರ "ಇಂಡಿಯಾ ವರ್ಸಸ್ ಇಂಗ್ಲೆಂಡ್" ಸೆನ್ಸಾರ್ ನಿಂದ ಮನ್ನಣೆಗಳಿಸಿ ಪ್ರಮಾಣಪತ್ರವನ್ನು ಪಡೆದು, 25ನೇ ಅಂತರರಾಷ್ಟ್ರೀಯ ಕೊಲ್ಕತ್ತಾ ಚಲನಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡು ಎಲ್ಲರ ಪ್ರಶಂಸೆಗಳಿಸಿದೆ. ಮೂಲತ: ಈ ಚಿತ್ರವು ಭಾರತದ ಇತಿಹಾಸದ ಬಗ್ಗೆ ಬೆಳಕು ಚೆಲ್ಲುತ್ತಾ, ಭಾರತೀಯ ಸಂಸ್ಕೃತಿ ಪರಂಪರೆಯ ಬಗ್ಗೆ ಜಾಗೃತಿ ಮೂಡಿಸುತ್ತಾ, ಕನ್ನಡ ನಾಡು-ನುಡಿಯ ಬಗ್ಗೆ ಅಭಿಮಾನ ತಾಳುವಂತಹ ಚಿತ್ರವಾಗಿರುತ್ತದೆ. ಕನ್ನಡವನ್ನು ವರ್ಣಮಾಲೆಗಳ ಮೂಲಕ ಕಲಿಯುವ ವಿಶೇಷವಾದ ಭಾವಗೀತೆಯೊಂದನ್ನು ಅಳವಡಿಸಲಾಗಿದೆ. ಆದುದರಿಂದ ಈ ಚಲನಚಿತ್ರವನ್ನು ರಾಜ್ಯದ ಎಲ್ಲಾ ಪಾಲಿಟೆಕ್ನಿಕ್ ಪದವಿ ತರಗತಿಗಳ ವಿದ್ಯಾರ್ಥಿ ಸಮೂದಾಯಕ್ಕೆ ರಿಯಾಯಿತಿ ದರದಲ್ಲಿ ಪ್ರದರ್ಶಿಸಲು ಇಲಾಖೆಯ ಅನುಮತಿ ನೀಡುವಂತೆ ಉಲ್ಲೇಖದ ಪತ್ರದಲ್ಲಿ ಕೋರಿರುತ್ತಾರೆ.

ಸಂಸ್ಥೆಯ ದೈನಂದಿನ/ಶೈಕ್ಷಣಿಕ ಕೆಲಸ ಕಾರ್ಯಗಳಿಗೆ/ಪಾಠ ಪ್ರವಚನಗಳಿಗೆ ತೊಂದರೆಯಾಗದಂತೆ, ನಾಗತಿಹಳ್ಳಿ ಸಿನಿ ಕ್ರಿಯೇಷನ್ಸ್ ಲಾಂಛನದಲ್ಲಿ ನಿರ್ಮಾಣವಾಗಿರುವ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಿತ್ರ "ಇಂಡಿಯಾ ವರ್ಸಸ್ ಇಂಗ್ಲೆಂಡ್" ಚಲನಚಿತ್ರವನ್ನು ರಾಜ್ಯದ ಎಲ್ಲಾ ಪಾಲಿಟೆಕ್ನಿಕ್ ವಿದ್ಯಾರ್ಥಿ ಸಮೂದಾಯಕ್ಕೆ ರಿಯಾಯಿತಿ ದರದಲ್ಲಿ ಪ್ರದರ್ಶಿಸಲು ಇಲಾಖೆಯಿಂದ ಅನುಮತಿ ನೀಡಲಾಗಿದೆ. ಈ ಸಂಬಂಧ ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳು, ಸಂಸ್ಥೆಯ ವಿದ್ಯಾರ್ಥಿಗಳ ಗಮನಕ್ಕೆ ತರುವ ಮೂಲಕ ಈ ಚಲನಚಿತ್ರದ ಸದುಪಯೋಗವನ್ನು ಪಡೆದುಕೊಳ್ಳುವಂತೆ, ಪ್ರೋತ್ಸಾಹಿಸಲು ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಡಾ॥ ನಾಗತಿಹಳ್ಳಿ ಚಂದ್ರಶೇಖರ, ನಿರ್ಮಾಪಕರು, ನಾಗತಿಹಳ್ಳಿ ಸಿನಿ ಕ್ರಿಯೇಷನ್ಸ್, 184, 'ಲಿರಿಕ್ಸ್' 17ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-70 ಇವರನ್ನು ಸಂಪರ್ಕಿಸುವುದು. (ಉಲ್ಲೇಖಿತ ಪತ್ರ ಲಗತ್ತಿಸಿದೆ)

ಜಂಟಿ ನಿರ್ದೇಶಕರು(ಸಿಡಿಸಿ)

ಇವರಿಗೆ:-
1. ರಾಜ್ಯದ ಎಲ್ಲಾ ಸರ್ಕಾರಿ/ಸರ್ಕಾರಿ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಪರಿಚಲನೆಯ ಮೂಲಕ/ಸಂಸ್ಥೆಯ ಸೂಚನಾಫಲಕದಲ್ಲಿ ಪ್ರಕಟಿಸಿ ವಿದ್ಯಾರ್ಥಿಗಳ ಗಮನಕ್ಕೆ ತರಲು ಸೂಕ್ತ ಕ್ರಮಕ್ಕಾಗಿ.
2. ಡಾ॥ ನಾಗತಿಹಳ್ಳಿ ಚಂದ್ರಶೇಖರ, ನಿರ್ಮಾಪಕರು, ನಾಗತಿಹಳ್ಳಿ ಸಿನಿ ಕ್ರಿಯೇಷನ್ಸ್, 184, 'ಲಿರಿಕ್ಸ್' 17ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-70 ಇವರ ಮಾಹಿತಿಗಾಗಿ.
3. ಇ-ಆಡಳಿತ ವಿಭಾಗ, ತಾಂ.ಶಿ.ನಿ, ಬೆಂಗಳೂರು ಇವರಿಗೆ ಡಿ.ಟಿ.ಇ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.

**ಡಾ. ನಾಗತಿಹಳ್ಳಿ ಚಂದ್ರಶೇಖರ**

'ಸಿಹಿಕನಸು' ನಂ.166, 17ನೇ ಮುಖ್ಯರಸ್ತೆ,
28ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು – 560 070

ಕಛೇರಿ : 184, 'ಲಿರಿಕ್ಸ್', 17ನೇ ಮುಖ್ಯರಸ್ತೆ,
ಬನಶಂಕರಿ 2ನೇ ಹಂತ, ಬೆಂಗಳೂರು–560 070
ದೂರವಾಣಿ : 080 – 2671 2230

**DR. NAGATHIHALLI CHANDRASHEKHAR**

'SIHIKANASU' No. 166, 17th Main Road,
28th Cross, BSK 2nd Stage,
Bengaluru - 560 070

Office : 184, 'Lyrics', 17th Main Road,
BSK 2nd Stage, Bengaluru - 560 070
Tel.: 080 - 2671 2230


ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ಸಂ. 7861
ದಿ. 17/2/20
ಬೆಂಗಳೂರು-1

ದಿನಾಂಕ: 11-02-2020

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು

ಮಾನ್ಯರೆ,

ವಿಷಯ: ನಮ್ಮ ನಾಗತಿಹಳ್ಳಿ ಸಿನಿ ಕ್ರಿಯೇಷನ್ಸ್ ಲಾಂಛನದಲ್ಲಿ ನಿರ್ಮಾಣವಾಗಿರುವ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಿತ್ರ "ಇಂಡಿಯಾ ವರ್ಸಸ್ ಇಂಗ್ಲೆಂಡ್" ಚಿತ್ರವನ್ನು ರಾಜ್ಯದ ಎಲ್ಲ ಖಾಸಗಿ/ ಅನುದಾನಿತ ಮತ್ತು ಸರ್ಕಾರಿ ಪಾಲಿಟೆಕ್ನಿಕ್ ಪದವಿ ತರಗತಿಗಳ ವಿದ್ಯಾರ್ಥಿ ಸಮುದಾಯಕ್ಕೆ ರಿಯಾಯಿತಿ ದರದಲ್ಲಿ ಪ್ರದರ್ಶಿಸಲು ಅನುಮತಿ ಕೋರಿ ಮನವಿ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಮೂಲತಃ ಬರಹಗಾರನೂ, ಅಧ್ಯಾಪಕನೂ ಆದ ನಾನು ಲೇಖಕ, ಚಿತ್ರ ನಿರ್ದೇಶಕನಾಗಿ ಹಲವಾರು ವರ್ಷಗಳಿಂದ ಸಾಹಿತ್ಯ ಕೃತಿಗಳನ್ನು, ಚಲನಚಿತ್ರಗಳನ್ನು ಸಾಮಾಜಿಕ ಜವಾಬ್ದಾರಿಯಿಂದ ನಿರ್ಮಿಸುತ್ತಾ ಬಂದಿದ್ದೇನೆ. ಇದಕ್ಕಾಗಿ ನನಗೆ ಮೂರು ಬಾರಿ ರಾಷ್ಟ್ರೀಯ ಪ್ರಶಸ್ತಿ, ಹದಿಮೂರು ಬಾರಿ ರಾಜ್ಯ ಪ್ರಶಸ್ತಿ ಲಭಿಸಿದೆ ಎಂದು ವಿನಯಪೂರ್ವಕವಾಗಿ ಹೇಳಲು ಇಷ್ಟಪಡುತ್ತೇನೆ.

ಇದೀಗ ನನ್ನ ಹದಿನೈದನೆಯ ಕನ್ನಡ ಚಿತ್ರ "ಇಂಡಿಯಾ ವರ್ಸಸ್ ಇಂಗ್ಲೆಂಡ್" ಸೆನ್ಸಾರ್‌ನಿಂದ ಮನ್ನಣೆ ಗಳಿಸಿ ಪ್ರಮಾಣಪತ್ರವನ್ನು ಪಡೆದು, ರಾಜ್ಯ, ರಾಷ್ಟ್ರ ಹಾಗೂ ವಿಶ್ವದ ಎಲ್ಲೆಡೆ ಸದಭಿರುಚಿಯ ಪ್ರೇಕ್ಷಕರಿಗೆ ಪ್ರದರ್ಶನ ಕಾಣುತ್ತಿದೆ. 25ನೇ ಅಂತರರಾಷ್ಟ್ರೀಯ ಕೊಲ್ಕತ್ತಾ ಚಲನಚಿತ್ರ ಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡು ಎಲ್ಲರ ಪ್ರಶಂಸೆ ಗಳಿಸಿದೆ. ಮೂಲತಃ ಈ ಚಿತ್ರವು ಭಾರತದ ಇತಿಹಾಸದ ಬಗ್ಗೆ ಬೆಳಕು ಚೆಲ್ಲುತ್ತಾ, ಭಾರತೀಯ ಸಂಸ್ಕೃತಿ ಪರಂಪರೆಯ ಬಗ್ಗೆ ಜಾಗೃತಿ ಮೂಡಿಸುತ್ತಾ, ಕನ್ನಡ ನಾಡು-ನುಡಿಯ ಬಗ್ಗೆ ಅಭಿಮಾನ ತಾಳುವಂತಹ ಚಿತ್ರವಾಗಿರುತ್ತದೆ. ಕನ್ನಡವನ್ನು ವರ್ಣಮಾಲೆಗಳ ಮೂಲಕ ಕಲಿಯುವ ವಿಶೇಷವಾದ ಭಾವಗೀತೆಯೊಂದನ್ನು ಅಳವಡಿಸಲಾಗಿದೆ. ಈ ಚಿತ್ರವನ್ನು ರಾಜ್ಯದ ಎಲ್ಲ ಖಾಸಗಿ/ಅನುದಾನಿತ ಮತ್ತು ಸರ್ಕಾರಿ ಪಾಲಿಟೆಕ್ನಿಕ್ ಪದವಿ ತರಗತಿಗಳ ವಿದ್ಯಾರ್ಥಿ ಸಮುದಾಯಕ್ಕೆ ರಿಯಾಯಿತಿ ದರದಲ್ಲಿ ಪ್ರದರ್ಶಿಸಲು ಅನುಮತಿ ಕೋರಿ ಮನವಿ.

ವಿದ್ಯಾರ್ಥಿಗಳ ಪಾಠಪ್ರವಚನಗಳಿಗೆ, ಶಾಲೆಯ ವೇಳಾ ಪಟ್ಟಿಗೆ ತೊಂದರೆಯಾಗದಂತೆ ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ ದರದಲ್ಲಿ ಚಿತ್ರವನ್ನು ಪ್ರದರ್ಶಿಸುತ್ತೇನೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ವಂದನೆಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ,

ನಾಗತಿಹಳ್ಳಿ ಚಂದ್ರಶೇಖರ

(ನಾಗತಿಹಳ್ಳಿ ಚಂದ್ರಶೇಖರ)
ಲೇಖಕ, ನಿರ್ಮಾಪಕ, ನಿರ್ದೇಶಕ

ಅಡಕಗಳು:

1. ಪ್ರಸ್ತಾವನೆ (ಕಥಾ ಸಾರಾಂಶವನ್ನು ಒಳಗೊಂಡಿದೆ)
2. ಸೆನ್ಸಾರ್ ಮಂಡಳಿಯ ಪ್ರಮಾಣಪತ್ರ
3. ಕೊಲ್ಕತ್ತಾ ಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡ ಪ್ರಮಾಣ ಪತ್ರ